# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ (ವಿಧಾನ ಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **50** |
| ಉತ್ತರಿಸಬೇಕಾದ ದಿನಾಂಕ | : | 15.02.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ನಗರ ಪ್ರದೇಶದ ಕೊಳಗೇರಿಗಳಿಗೆ ಕುಡಿಯುವ ನೀರು ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಕೊಳಗೇರಿ ಸುಧಾರಣೆ ಯೋಜನೆಯಡಿ ಮಂಜೂರು ಮಾಡುವ ಅನುದಾನಕ್ಕನುಗುಣವಾಗಿ ಕೊಳಗೇರಿ ಪ್ರದೇಶಗಳಿಗೆ ರಸ್ತೆ, ಚರಂಡಿ, ನೀರಿನ ಸೌಲಭ್ಯ, ಬೀದಿ ದೀಪ, ಒಳಚರಂಡಿ, ಸಾಮೂಹಿಕ ಶೌಚಾಲಯ, ಅಂಗನವಾಡಿ ಮುಂತಾದ ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ತಯಾರಿಸಿ, ಸದರಿ ಕ್ರಿಯಾ ಯೋಜನೆಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಪಡೆದು ಒದಗಿಸಲಾಗುತ್ತಿದೆ. |
| ಆ) | ಕಳೆದ 3 ವರ್ಷಗಳಲ್ಲಿ ನಗರ ಪ್ರದೇಶದ ಕೊಳಗೇರಿಗಳಲ್ಲಿನ ಮನೆಗಳಿಗೆ ನಲ್ಲಿ ಮೂಲಕ ಕುಡಿಯುವ ನೀರು ಸರಬರಾಜು ಮಾಡಲು ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಿಂದ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ರಾಜ್ಯಾದ್ಯಂತ ಇರುವ ಕೊಳಗೇರಿ ನಿವಾಸಿಗಳಿಗೆ ನೀರಿನ ಸೌಲಭ್ಯ ಒದಗಿಸಲು ರೂ.726.45 ಲಕ್ಷಗಳ ವೆಚ್ಚ ಮಾಡಲಾಗಿರುತ್ತದೆ. ವಿಭಾಗವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ಅಶುದ್ಧ ನೀರನ್ನು ಕೊಳಗೇರಿಯಲ್ಲಿನ ನಿವಾಸಿಗಳು ಬಳಸುತ್ತಿರುವುದರಿಂದ ಅವರ ಆರೋಗ್ಯದ ಮೇಲಾಗುವ ಪರಿಣಾಮಗಳಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ. ಈ ಕುರಿತು ಸರ್ಕಾರದ ನಿಲುವೇನು ? | ಈ ಕುರಿತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಯಾವುದೇ ವರದಿಯಾಗಿರುವುದಿಲ್ಲ. |

ಸಂಖ್ಯೆ :ವಇ 21 ಎಸ್‌ಬಿಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

ಅನುಬಂಧ

| ಕ್ರಸಂ | ವಿಭಾಗ | ಮೊತ್ತ ರೂ. ಲಕ್ಷಗಳಲ್ಲಿ | | |
|---|---|---|---|---|
| | | 2018–19 | 2019–20 | 2020–21 |
| 1 | ನಂ.1ನೇ ವಿಭಾಗ, ಬೆಂಗಳೂರು | 142.76 | 226.5 | 70.00 |
| 2 | ನಂ.2ನೇ ವಿಭಾಗ, ಬೆಂಗಳೂರು | 35.54 | 36.58 | 25.00 |
| 3 | ನಂ.3ನೇ ವಿಭಾಗ, ಬೆಂಗಳೂರು | 20.00 | 81.00 | 14.00 |
| 4 | ನಂ.1ನೇ ವಿಭಾಗ, ಮೈಸೂರು | 00.00 | 00.00 | 00.00 |
| 5 | ನಂ.2ನೇ ವಿಭಾಗ, ಮೈಸೂರು | 00.00 | 00.00 | 00.00 |
| 6 | ಶಿವಮೊಗ್ಗ ವಿಭಾಗ | 00.00 | 00.00 | 00.00 |
| 7 | ದಾವಣಗೆರೆ ವಿಭಾಗ | 00.00 | 00.00 | 00.00 |
| 8 | ಧಾರವಾಡ ವಿಭಾಗ | 00.00 | 00.00 | 00.00 |
| 9 | ಬೆಳಗಾವಿ ವಿಭಾಗ | 17.66 | 16.31 | 30.00 |
| 10 | ಕಲಬುರಗಿ ವಿಭಾಗ | 00.00 | 00.00 | 11.10 |
| | ಒಟ್ಟು | **215.96** | **360.39** | **150.10** |